ॐ

ISSN 2250-1711

सत्यं ज्ञानमनन्तम्

# Journal of Veda Saṁskṛta Academy

## A National Refereed Research Journal

मूल्याङ्किता राष्ट्रियसंशोधनपत्रिका

**Volume : XI**

**January to June - 2018**

वेद संस्कृत अकाडेमि (रं.)

VEDA SAMSKṚTA ACADEMY (R.)

सत्यं ज्ञानमनन्तम्

*Edited by the Director :*

**Dr. Gopalkrishna Hegde**

Jyotishashastra-Dharmashastra Vidwan

**VEDA SAMSKRITA ACADEMY (R.)**

Kalkod Road, Hegde - 581330, KUMTA, Uttara Kannada, Karnataka.

ISSN 2250-1711

॥ सत्यं ज्ञानमनन्तम् ॥

# JOURNAL OF VEDA SAMSKRITA ACADEMY

A National Refereed Research Journal

मूल्याङ्किता राष्ट्रियसंशोधनपत्रिका

VOLUME: XI

January to June - 2018

Chief-Editor :

DR. GOPALKRISHNA HEGDE

[Jyotishashastra-Dharmashastra Vidwan]

VEDA SAMSKRITA ACADEMY (R.)

[Formerly: Veda Samskrita Prasarinee Sabha]

[No.: DR : SOR : 108 : 2003-04 Dated : 30-10-2003]

| | | |
|---|---|---|
| Title of the Journal | : | **Journal of**<br>**Veda Samskrita Academy**<br>**A National Refereed Research Journal**<br><br>मूल्याङ्किता राष्ट्रियसंशोधनपत्रिका |
| **ISSN** | : | **2250-1711** |
| Editor & Publisher | : | **Dr. Gopalkrishna Hegde**<br>gopalkrishnh9@gmail.com<br>08386-260135<br>09741847399<br><br>**Director,**<br>**Veda Samskrita Academy (Regd.)**<br>Kalkod Road, HEGDE- 581330<br>Kumta, Uttara Kannada, Karnataka |
| **web site** | : | **www.vedasamskritaacademy.org** |
| **E-mail** | : | **vedasmkac@gmail.com** |

**All rights are Reserved with the Publisher**

**" All opinion / views expressed in the research papers are of the authors only, no way they are ascribed to the Academy"**

| | | |
|---|---|---|
| Languages | : | Samskrita, Kannada, English,Hindi |
| Imprint | : | **Volume XI : January to June–2018** |
| Paper | : | 70gsm (B2B) and Art paper – 300gsm |
| Size of the Journal | : | 21 X 14 cm |
| Number of Pages | : | 144 + 12 + 3 |
| Number of Copies | : | 100 |
| D. T. P. | : | Pavan Graphics, Hegde |
| Art works | : | Girish R. Bhat, Digital World, Kumta |
| Printing & Binding | : | Shri Krishna Mudranalaya, Hegde |
| Price | : | **Rs. 100 /- per volume** |

# विषयसूची
# CONTENTS


सम्पादकीयम् V

Editorial Note VI-VII

ಮೊದಲ ಮಾತು VIII -XI

Editorial Advisory Board XII

1. रामायणमञ्जर्याम् अनुप्रासप्रभेदाः 1-8
   –विद्वान् महेश भट्टः आर्. (उडुपि)
2. असिद्धं बहिरङ्गमन्तरङ्गे इति परिभाषाविचारः 9-15
   –विद्वान् महेश भट्टः (उम्मचगि)
3. शास्त्रारम्भविचारः 16-23
   –विद्वान् सुब्रह्मण्य भट्टः (बेङ्गळूरु)
4. मातृकानुसन्धानविमर्शः, तत्स्वरूपञ्च 24-36
   –विद्वान् आर्. तिम्मण्णः (बेङ्गळूरु)
5. स्तुत्यात्मकं श्रीकृष्णलीलामृतं श्रीमद्भागवतम् 37-42
   –विद्वान् प्रदीप जोशि (सिद्दापुर)
6. ವಿಶಿಷ್ಟಾದ್ವೈತ ದರ್ಶನದ ಪ್ರವರ್ತಕರಾದ ಶ್ರೀರಾಮಾನುಜ-ಆಚಾರ್ಯರ ವೈಭವ 43-50
   –ए. श्रीनिवास रङ्गन् (मैसूरु)
7. ಮಹಾಭಾರತದಲ್ಲಿ ಪ್ರತಿಪಾದಿತವಾಗಿರುವ ಸುಭಾಷಿತಗಳು – ಒಂದು ವಿಮರ್ಶಾತ್ಮಕ ಅಧ್ಯಯನ 51-55
   –एस्. विद्याश्री (मैसूरु)
8. ಭಾಸನ ರೂಪಕಗಳಲ್ಲಿ ಕಾವ್ಯತತ್ತ್ವಗಳು 56-63
   –विद्वान् वनराज बि. के. (बेङ्गळूरु)
9. यज्ञपत्युपाध्यायविरचितायाः प्रभायाः वैशिष्ट्यम् 64-69
   –विद्वान् राघव के. एल्. (गोकर्ण)
10. दर्शनसङ्क्षेपः 70-77
    –श्रीहरिः आर्. वाल्वेकरः (हुब्बळ्ळि)
11. ರಘುವಂಶ ಮಹಾಕಾವ್ಯದಲ್ಲಿ ಪರಿಸರ ವರ್ಣನೆ – ಒಂದು ಪಕ್ಷಿನೋಟ 78-82
    –डा. बि. गोविन्द (बेङ्गळूरु)

Journal of Veda Samskrita Academy
ISSN 2250-1711
Volume XI : January to June – 2018

# ಭಾಸನ ರೂಪಕಗಳಲ್ಲಿ ಕಾವ್ಯತತ್ತ್ವಗಳು

–ವನರಾಜ ಬಿ.ಕೆ. (ಬೆಂಗಳೂರು)*

**ಪೀಠಿಕೆ :–**

ಸಂಸ್ಕೃತ ಭಾಷೆಯು ಸನಾತನವೂ ಶ್ರೀಮಂತವೂ ಆಗಿದೆ. ಭಾರತದ ಸಂಸ್ಕೃತಿಯ ಮೂಲಸ್ರೋತಸ್ಸುಗಳಾದ ವೇದೋಪನಿಷದಾದಿಗಳುಹೃದ್ಯವೂ ಮಧುರವೂ ಆದ ದೇವಭಾಷೆ ಸಂಸ್ಕೃತದಲ್ಲೇ ಸಾಕ್ಷಾತ್ಕರಿಸಲ್ಪಟ್ಟಿವೆ. ಇಂತಹ ಭಾರತೀಯ ಭಾಷೆಗಳ ಜೀವಾತುಭೂತವಾದ ಸಂಸ್ಕೃತಭಾಷೆಯನ್ನು ಅನೇಕ ಕವಿಗಳು ತಮ್ಮ ಅತ್ಯಮೂಲ್ಯ-ವಾದ ಸಾಹಿತ್ಯರಚನೆಯಿಂದ ಅಲಂಕರಿಸಿದ್ದಾರೆ. ಸಂಸ್ಕೃತ ಭಾಷಾಸಾಹಿತ್ಯದಲ್ಲಿ ಇಲ್ಲದೇ ಇದ್ದದ್ದು ಬೇರೆಲ್ಲೂ ಸಿಗದು ಎಂಬ ಪ್ರಶಂಸೆಯು ಸಂಸ್ಕೃತಸಾಹಿತ್ಯದ ಅಗಾಧತೆಯನ್ನು ನಿರೂಪಿಸುತ್ತದೆ. ದೃಶ್ಯಶ್ರವ್ಯಕಾವ್ಯಭೂಯಿಷ್ಠವಾದ ಸಂಸ್ಕೃತಸಾಹಿತ್ಯವು ಇಂದಿಗೂ ಸಹೃದಯರನ್ನು ಅನೇಕ ರೀತಿಯಲ್ಲಿ ತರ್ಪಿಸುತ್ತಿದೆ. ದೃಶ್ಯಕಾವ್ಯದ ಇತಿಹಾಸದಲ್ಲಿ ಅಜರಾಮರವಾದ ಕೀರ್ತಿಯನ್ನು ಪಡೆದವನು ರೂಪಕಸಾಮ್ರಾಜ್ಯದ ಚಕ್ರವರ್ತಿ ಮಹಾಕವಿ ಭಾಸ. ಇವನ ಅಭೂತಪೂರ್ವವಾದ ಹದಿನಾಲ್ಕು ರೂಪಕಗಳು ಸಂಸ್ಕೃತ ದೃಶ್ಯಸಾಹಿತ್ಯದ ಅನರ್ಘವಾದ ರತ್ನಗಳಾಗಿವೆ.

ರೂಪಕಗಳೆಂದರೆ ಕೇವಲ ಪ್ರದರ್ಶನಕ್ಕಾಗಿಯೇ ಇರುವುದು ಎಂಬ ಕಲ್ಪನೆಯೊಂದಿದೆ. ಆದರೆ ರೂಪಕಗಳಲ್ಲಿ ಅಭಿನಯಕ್ಕೆ ಉಚಿತವಾದ ಅಂಶಗಳೊಂದಿಗೆ ಬಹಳಷ್ಟು ಕಾವ್ಯಾಂಶಗಳು ನಿವೇಶಿಸಲ್ಪಟ್ಟಿರುತ್ತವೆ.ಆದ ಕಾರಣ ರೂಪಕಗಳು ಕಾವ್ಯತತ್ತ್ವಗಳ ಆಕರಗಳೂ ಹೌದು. ಭಾಸನ ರೂಪಕಗಳಲ್ಲಿ ಅದ್ಭುತವಾದ ಕಾವ್ಯತತ್ತ್ವಗಳನ್ನು ಕಾಣಬಹುದು. ಸಾಹಿತ್ಯಶಾಸ್ತ್ರದ ಸಂರಕ್ಷಣೆಗೆ ಈ ರೂಪಕಗಳಲ್ಲಿ ಅಡಕವಾಗಿರುವ ರಸರೀತ್ಯಾದಿಕಾವ್ಯತತ್ತ್ವಗಳ ಅನ್ವೇಷಣೆ ಅತ್ಯಗತ್ಯ. ಅಲ್ಲದೆ ಈ ಕಾವ್ಯತತ್ತ್ವಗಳು ನಾಯಕನ ಗುಣಗಣಗಳ ಅಧ್ಯಯನಕ್ಕೆ ಪೂರಕವಾಗಿರುವುದರಿಂದ ಶೋಧಕಾರನಿಂದ ಅವುಗಳ ಸಂಕ್ಷೇಪವಾದ ಅಧ್ಯಯನವು ಮಾಡಲ್ಪಟ್ಟು ಸಾರಾಂಶವು ಲೇಖನದ ರೂಪದಲ್ಲಿ ನೀಡಲ್ಪಟ್ಟಿದೆ.

**ಸಂಸ್ಕೃತಭಾಷೆ :–**

ಸಂಸ್ಕೃತಭಾಷೆಯು ಅತ್ಯಂತ ಪ್ರಾಚೀನವಾದ ಭಾಷೆಯಾಗಿದ್ದು ಭಾರತೀಯ ಸಂಸ್ಕೃತಿಯ ದ್ಯೋತಕವಾಗಿದೆ.

---

*( वनराज बि. के. महाभागः कृष्णराजनगरे स्थितस्य वेदान्तभारत्याः निर्देशकानां डा. श्रीधर भट्ट ऐनकै महोदयानां मार्गदर्शनेन "ಭಾಸನ ರೂಪಕಗಳಲ್ಲಿ ನಾಯಕರು – ಒಂದು ವಿಮರ್ಶಾತ್ಮಕ ಅಧ್ಯಯನ" इत्यस्मिन् विषये तुमकूरुविश्व-विद्यालये संशोधनकर्मणि रतः ।)

ಈ ಭಾಷೆಯು ಭಾರತೀಯಸಾಹಿತ್ಯದ ಮೂಲಸ್ರೋತವಾಗಿದ್ದು ಸರ್ವ ಭಾಷಾಜನನೀ ಎಂಬ ಖ್ಯಾತಿಯನ್ನು ಪಡೆದಿದೆ. ದೇವಾನುದೇವತೆಗಳ ವ್ಯಾವಹಾರಿಕ ಭಾಷೆಯೆಂದು ಸ್ತುತಿಸಲ್ಪಟ್ಟಿರುವುದರಿಂದ ಸಂಸ್ಕೃತವು ದೇವಭಾಷೆಯಾಗಿದೆ. ವೇದೋ-ಪನಿಷದಾದಿಗಳಿಂದಾಗಿ ಸಂಸ್ಕೃತವು ಪವಿತ್ರವೂ ಸನಾತನವೂ ಆಗಿದೆ. ವಿಸ್ತೃತವಾದ ವ್ಯವಸ್ಥಿತವಾದ ವ್ಯಾಕರಣದಿಂದ ಸಂಸ್ಕರಿಸಲ್ಪಟ್ಟು ಶ್ಲಿಷ್ಟವೂ ಶಿಷ್ಟವೂ ಆಗಿದೆ. ಅದ್ಭುತವಾದ ಅನಂತವಾದ ಸಾಹಿತ್ಯರಾಶಿಯಿಂದ ಅಲಂಕೃತವಾಗಿ ಹೃದ್ಯವಾಗಿದೆ. ಉಪಮಾದಿ ಅಲಂಕಾರಗಳಿಂದ ನಾನಾವಿಧವಾದ ರಸಾದಿ ಕಾವ್ಯಾಂಶಗಳಿಂದ ಭೂಯಿಷ್ಠವಾದ ಸಂಸ್ಕೃತವು ಅತ್ಯಂತ ಮಧುರವಾಗಿದೆ. ಇಂತಹ ಸರ್ವಮಾನ್ಯವಾದ ಭಾಷೆಯ ಸಾಹಿತ್ಯ ಇಂದಿಗೂ ಪ್ರಸ್ತುತವೂ ಮಾರ್ಗದರ್ಶಕವೂ ಆಗಿದೆ.

**ಸಂಸ್ಕೃತಸಾಹಿತ್ಯ :-**

ವಿಶ್ವಸ್ತರದಲ್ಲಿ ಅಗ್ರಮಾನ್ಯವಾದ ಸಾಹಿತ್ಯಗಳಲ್ಲಿ ಪ್ರಸಿದ್ಧವಾದುದು ಸಂಸ್ಕೃತಭಾಷಾಸಾಹಿತ್ಯ. ಇದು ಅಗಾಧವೂ ಅನಂತವೂ ಆಗಿದೆ. ಸಂಸ್ಕೃತಸಾಹಿತ್ಯದಲ್ಲಿ ಇಲ್ಲದೇ ಇರುವ ವಿಷಯವೇ ಇಲ್ಲ ಎನ್ನುವಷ್ಟರಮಟ್ಟಿಗೆ ಸಂಸ್ಕೃತಸಾಹಿತ್ಯದ ಶ್ರೀಮಂತಿಕೆ ಇದೆ. ಆದ ಕಾರಣ ಸಂಸ್ಕೃತಸಾಹಿತ್ಯದ ವಿಚಾರಗಳು ಅಳತೆಗೆ ನಿಲುಕದ್ದಾಗಿವೆ. ಅಪರಿಮಿತವಾದ ಈ ಸಾಹಿತ್ಯದಲ್ಲಿ ಮಾನವನು ತನ್ನ ಜೀವಿತಾವಧಿಯಲ್ಲಿ ಕೇವಲ ಅಣುಮಾತ್ರವನ್ನು ಮಾತ್ರ ಆಸ್ವಾದಿಸಬಹುದು. ಭಾರತದ ಪರಮಪ್ರಮಾಣಭೂತವಾದ ವೇದರಾಶಿಯು ಸಂಸ್ಕೃತಸಾಹಿತ್ಯದ ಮೂಲ. ಇದೇ ಕಿರೀಟಪ್ರಾಯವೂ ಹೌದು. ಜಗತ್ತಿಗೆ ಅಧ್ಯಾತ್ಮವಿದ್ಯೆಯನ್ನು ಬೋಧಿಸಿದ ಹಾಗೂ ಬೋಧಿಸುತ್ತಿರುವ ಉಪನಿಷತ್ತುಗಳು ಸಂಸ್ಕೃತಸಾಹಿತ್ಯದ ಕಾಣಿಕೆಗಳೇ. ಸರ್ವವಿಧವಾದ ಪ್ರವೃತ್ತಿನಿವೃತ್ತಿಗಳ ಮೂಲವಾದ ಪುರಾಣಗಳೂ ಸಂಸ್ಕೃತಸಾಹಿತ್ಯದ ಸಾರಗಳಾಗಿವೆ. ಜಗತ್ತಿನಲ್ಲಿಯೇ ತನ್ನ ಗಾತ್ರದಲ್ಲಿವಿಷಯವೈಶಾಲ್ಯದಲ್ಲಿ ದೊಡ್ಡದಾಗಿರುವ ನಾನಾವಿಧವಾದ ನೀತಿಬೋಧೆಗಳನ್ನು ಮಾಡುತ್ತಿರುವ ರಾಮಾಯಣಮಹಾಭಾರತಗಳು ಸಂಸ್ಕೃತಸಾಹಿತ್ಯದ ಎರಡು ಕಣ್ಣುಗಳಿದ್ದಂತೆ. ತದನಂತರ ಸಹೃದಯಹೃದಯಾಹ್ಲಾದನೆಗಾಗಿ ಪ್ರತಿಭಾಶಾಲಿಗಳಾದ ಕವಿಶ್ರೇಷ್ಠರಿಂದ ವಿರಚಿಸಲ್ಪಟ್ಟಂತಹ ಕಾವ್ಯರಾಶಿಗಳು ಸಾಹಿತ್ಯದ ಅಮೂಲ್ಯ ಕೊಡುಗೆಗಳಾಗಿವೆ. ಸಂಸ್ಕೃತಸಾಹಿತ್ಯವು ಮಾನವೀಯತೆಯ ವಿಶ್ವಸಮಾನತೆಯ ಮೂಲ ಜೀವಾತುವಾಗಿದೆ.

**ಸಂಸ್ಕೃತಸಾಹಿತ್ಯದ ವಿಧಗಳು :-**

ವಿಶ್ವಮಾನ್ಯವಾದ ಭಾರತಕ್ಕೆ ವಿಶ್ವಗುರುವಿನ ಪಟ್ಟವನ್ನು ನೀಡಿದಂತಹ ಅಮೂಲ್ಯವಾದ ಸಂಸ್ಕೃತ ಸಾಹಿತ್ಯವನ್ನು ಪ್ರಧಾನವಾಗಿ ದೃಶ್ಯಶ್ರವ್ಯಚಂಪೂರೂಪದಲ್ಲಿ ಮೂರು ವಿಧವಾಗಿ ವಿಂಗಡಿಸಲಾಗಿದೆ. ಎಲಾ ರೀತಿಯ ಕಾವ್ಯತತ್ತ್ವಗಳಿಂದ ಕೂಡಿದ್ದರೂರಸಭಾವಾದಿಕಾವ್ಯಾಂಶಗಳಿದ್ದರೂ ನೂಡುವುದರಿಂದಲೆ ಹೆಚ್ಚಿನ ಆಹ್ಲಾದವನ್ನು ನೀಡುವಂತ ಸಂಸ್ಕೃತಸಾಹಿತ್ಯಪ್ರಕಾರವೇ ದೃಶ್ಯಕಾವ್ಯ. ಹಾಗೆಯೇ

ಕೇಳುವಿಕೆಯೇ ಪ್ರಧಾನವಾಗಿರುವ ಸಾಹಿತ್ಯಪ್ರಕಾರವೇ ಶ್ರವ್ಯ. ಈ ಎರಡರ ಕ್ರಮಬದ್ಧವಾದ ಸಮ್ಮಿಲನವೇ ಚಂಪೂಕಾವ್ಯ.

**ದೃಶ್ಯಕಾವ್ಯಗಳು:-**

**'कवेः कर्म काव्यम्'** ಎಂಬ ನಿಷ್ಪತ್ತಿಯಂತೆರಚನೆಯಾದ ಕಾವ್ಯಗಳ ಮಹಾ ಪ್ರಪಂಚವೇಇಂದುಗೋಚರಿಸುತ್ತದೆ.

**काव्यं यशसे अर्थकृते व्यवहारविदे शिवेतरक्षतये ।**
**सद्यःपरनिर्वृतये कान्तासंमिततयोपदेशयुजे ॥**

ಎಂಬಿತ್ಯಾದಿ ಪ್ರಯೋಜನಗಳನ್ನು ಆಕಾಂಕ್ಷಿಸಿ ನಿರ್ಮಿತವಾದಕಾವ್ಯ ಸಾಹಿತ್ಯ ಪ್ರಪಂಚ ಸದಾಕಾಲವೂ ಸಹೃದಯರ ಹೃದಯಕ್ಕೆ ಕಾಂತಾಸಮ್ಮಿತವಾಗಿ ತಂಪೆರೆಯುತ್ತದೆ.

ಸಂಸ್ಕೃತಕಾವ್ಯ ಸಾಹಿತ್ಯವನ್ನು ದೃಶ್ಯ ಹಾಗೂ ಶ್ರವ್ಯ ಕಾವ್ಯಗಳೆಂದು ಪ್ರಧಾನವಾಗಿಎರಡು ಭಾಗ ಮಾಡಲಾಗಿದೆ. ಶ್ರವ್ಯ ಕಾವ್ಯಗಳನ್ನು ಪುನಃ ಗದ್ಯ, ಪದ್ಯ ಮತ್ತು ಚಂಪೂ ಕಾವ್ಯಗಳೆಂದು ಮೂರು ವಿಧವಾಗಿ ವಿಭಾಗಿಸಲಾಗಿದೆ. ಪದ್ಯಸಾಹಿತ್ಯದಲ್ಲಿಪುನಃ ಮಹಾಕಾವ್ಯಗಳು ಮತ್ತು ಖಂಡಕಾವ್ಯಗಳೆಂಬ ಎರಡು ಪ್ರಧಾನ ಪ್ರಕಾರಗಳಿವೆ. ಈ ಖಂಡಕಾವ್ಯಗಳಲ್ಲಿ ಪುನಃ ಪ್ರೇಮಕಾವ್ಯ, ದೂತಕಾವ್ಯ ಮುಂತಾದ ಉಪ ವಿಭಾಗಗಳಿವೆ. ಈ ಖಂಡಕಾವ್ಯಗಳಲ್ಲಿ ಮೇಘದೂತ, ಋತುಸಂಹಾರಇತ್ಯಾದಿ ಕಾವ್ಯಗಳು ಪ್ರಖ್ಯಾತವಾಗಿವೆ.

ಕಣ್ಣಿನಿಂದ ನೋಡಿ ಆನಂದಿಸಬಹುದಾದ ಕಾವ್ಯಪ್ರಕಾರಗಳಿಗೆ ದೃಶ್ಯಕಾವ್ಯಗಳೆಂದು ಹೆಸರು. ಇಲ್ಲಿ ಕೇಳುವಿಕೆಯಿದ್ದರೂ ನೋಟವೇ ಪ್ರಧಾನವಾಗಿರುತ್ತದೆ. ಆದ ಕಾರಣ ರೂಪಕಗಳು ಮತ್ತು ಉಪರೂಪಕಗಳು ದೃಶ್ಯಕಾವ್ಯಗಳಲ್ಲಿ ಅಂತರ್ಭಾವವನ್ನು ಹೊಂದುತ್ತವೆ. ಅಭಿನಯದಮೂಲಕ ವಸ್ತುವಿಶೇಷವನ್ನು ಅಥವಾ ವ್ಯಕ್ತಿವಿಶೇಷವನ್ನು ಬಿಂಬಿಸಿ ಸಹೃದಯರನ್ನು ರಂಜಿಸುವುದೇ ನಾಟಕಾದಿದೃಶ್ಯಕಾವ್ಯಗಳ ಉದ್ದೇಶವಾಗಿರುತ್ತದೆ. ಹಿಂದಿನಕಾಲದಲ್ಲಿ ಜನರಿಗೆ ರೂಪಕಗಳೇ ಏಕಮಾತ್ರ ಮನೋರಂಜನೆಯ ಸಾಧನಗಳಾಗಿದ್ದವು. ಆದ್ದರಿಂದಲೇ ಕಾಳಿದಾಸನು-

**"ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಮ್"**

ಎಂದು ರೂಪಕವನ್ನು ಕೊಂಡಾಡಿದ್ದಾನೆ. ಪ್ರಧಾನವಾಗಿ ಸಂಸ್ಕೃತಸಾಹಿತ್ಯದಲ್ಲಿ ಹತ್ತು ವಿಧವಾದ ರೂಪಕಗಳಿವೆ. ಹದಿನೆಂಟು ವಿಧವಾದ ಉಪರೂಪಕಗಳಿವೆ.

ಭಾಸ :–

ಸುರಭಾರತಿಯ ಸಾಹಿತ್ಯ ಸಿಂಹಾಸನವನ್ನು ಅಲಂಕರಿಸಿದ ವ್ಯಾಸ, ಕಾಳಿದಾಸ, ಬಾಣ, ಭವಭೂತಿ ಮುಂತಾದ ಕವಿಗಳ ನಡುವೆಅತ್ಯಂತ ಶೋಭಾಯಮಾನನಾಗಿ ಬೆಳಗುವ ಮತ್ತೋರ್ವ ಕವಿ ಎಂದರೆ ರೂಪಕಸಾಮ್ರಾಜ್ಯದ ಚಕ್ರವರ್ತಿ ಭಾಸ. ಇವನ ಜೀವಿತಕಾಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಸಹ ಇವನ ಕಾಲ ಕ್ರಿ.ಶ. 4 ಅಥವಾ ಕ್ರಿ.ಪೂ.ಪ್ರಥಮ ಶತಮಾನ ಎಂಬುದಾಗಿ ಎರಡು ವಿಕಲ್ಪಗಳು ಅಂಗೀಕರಿಸಲ್ಪಟ್ಟಿವೆ. ಇವನು ಮಹಾಕವಿ ಕಾಳಿದಾಸನ ಪೂರ್ವವರ್ತಿಯಾಗಿದ್ದನು ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಭಾಸನು ರಾಮಯಣವನ್ನು ಆಧಾರವಾಗಿಟ್ಟುಕೊಂಡು ಮೂರು, ಮಹಾಭಾರತದ ಆಧಾರದ ಮೇಲೆ ಆರು, ಭಾಗವತದ ಆಧಾರದ ಮೇಲೆ ಒಂದು ಹಾಗು ಬೃಹತ್ಕಥೆಯ ಆಧಾರದಲ್ಲಿ ಎರಡು ಹಾಗೂ ಸ್ವಯಂ ಪ್ರತಿಭೆಯಿಂದ ಎರಡು ಒಟ್ಟಾಗಿ ಹದಿನಾಲ್ಕು ರೂಪಕಗಳನ್ನು ರಚಿಸಿದ್ದಾನೆ.

ಕಾವ್ಯತತ್ತ್ವಗಳು:–

ಕಾವ್ಯಶಾಸ್ತ್ರದ ನಿರೂಪಣೆಯನ್ನು ಮಾಡುವ ಅಲಂಕಾರಶಾಸ್ತ್ರದ ಗ್ರಂಥಗಳು ಮೊದಲು ಕಾವ್ಯದ ಪ್ರಯೋಜನಗಳನ್ನೆ ವಿಮರ್ಶಿಸುತ್ತವೆ. ಅದಾದ ಮೇಲೆ ಕಾವ್ಯದ ಹೇತುಗಳನ್ನು ಮತ್ತು ಕಾವ್ಯದ ಸ್ವರೂಪಗಳನ್ನು ಲಕ್ಷ್ಯೀಕರಿಸುತ್ತವೆ. ಕಾವ್ಯವೆಂದರೆ ಶಬ್ದಾರ್ಥಗಳ ಯುಗಲವಾದ್ದರಿಂದ ಕಾವ್ಯಶಾಸ್ತ್ರಗ್ರಂಥಗಳಲ್ಲಿ ಶಬ್ದವಿಧಗಳು, ಅರ್ಥವಿಧಗಳು, ಅಭಿಧಾದಿಶಬ್ದವ್ಯಾಪಾರ, ಕಾವ್ಯಸ್ಯ ಆತ್ಮ ಮತ್ತು ಕಾವ್ಯದ ವಿಧಗಳು ಅತಿಶಯವಾಗಿ ಪ್ರತಿಪಾದಿಸಲ್ಪಟ್ಟಿವೆ. ಗುಣಗಳು ದೋಷಗಳು ಹಾಗು ರೀತಿಗಳು ವಿವೇಚಿಸಲ್ಪಡುತ್ತವೆ. ಶಬ್ದಾಲಂಕಾರಗಳ ಹಾಗೂ ಅರ್ಥಾಲಂಕಾರಗಳ ವಿವರಣೆ ಮಾಡಲ್ಪಟ್ಟಿವೆ. ಕೆಲವೊಂದು ಅಲಂಕಾರಶಾಸ್ತ್ರಗ್ರಂಥಗಳಲ್ಲಿ ನಾಟಕವಿಚಾರಗಳು ಕಾವ್ಯದಸಮಯಗಳು ವಿಸ್ತಾರವಾಗಿ ಹೇಳಲ್ಪಟ್ಟಿವೆ. ಈ ರೀತಿಯಾಗಿ ಅಲಂಕಾರಗ್ರಂಥಗಳಲ್ಲಿ ಕಾವ್ಯದ ಲಕ್ಷಣಗಳು, ಕಾವ್ಯದ ಆತ್ಮ, ರಸಪ್ರತೀತಿ, ಗುಣವಿಷಯಗಳು ಮುಂತಾದ ಅನೇಕ ವಿಷಯಗಳು ಚರ್ಚಿಸಲ್ಪಟ್ಟಿವೆ.

ಕಾವ್ಯತತ್ತ್ವಗಳು :–

ಕಾವ್ಯದಲ್ಲಿ ಅಡಕವಾಗಿರುವ ತತ್ತ್ವಗಳನ್ನು ಅಥವಾ ಕಾವ್ಯಧರ್ಮಗಳನ್ನು ಕಾವ್ಯತತ್ತ್ವಗಳು ಎನ್ನುವರು. ಪ್ರಾಯಶಃ ಕಾವ್ಯಗಳಲ್ಲಿ ಛಂದಸ್ಸು, ರಸಗಳು, ಅಲಂಕಾರಗಳು, ರೀತಿಗಳು, ಧ್ವನಿಗಳು, ಗುಣಗಳು, ವಕ್ರೋಕ್ತಿಗಳು, ಔಚಿತ್ಯಗಳು ಮುಂತಾದ ಅಂಶಗಳು ಇರುತ್ತವೆ. ಈ ಅಂಶಗಳನ್ನು ಕಾವ್ಯಧರ್ಮಗಳು ಅಥವಾ ಕಾವ್ಯತತ್ತ್ವಗಳು ಎನ್ನುವರು.

**ಭಾಸನ ರೂಪಕಗಳಲ್ಲಿ ಕಾವ್ಯತತ್ತ್ವಗಳು:–**

ಭಾಸನು ರೂಪಕಸಾಮ್ರಾಜ್ಯದ ಚಕ್ರವರ್ತಿ. ಅವನು ದೃಶ್ಯಕಾವ್ಯಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಪಾರವಾದುದು. ಅವನ ರೂಪಕಗಳಲ್ಲಿ ರೂಪಕಲಕ್ಷಣಗಳು ನಾಟ್ಯಶಾಸ್ತ್ರದ ಗ್ರಂಥಗಳಲ್ಲಿ ಹೇಳಿರುವಂತೆ ಇರುವುದು ಅವನ ಪ್ರತಿಭಾವೈಶಾಲ್ಯಕ್ಕೆ ಸಾಕ್ಷಿಯಾಗಿದೆ. ರೂಪಕದ ದೃಷ್ಟಿಕೋನದಲ್ಲಿ ನೋಡಿದಾಗ ಪಾತ್ರಚಿತ್ರಣಗಳು ಸನ್ನಿವೇಶವಿಶೇಷಗಳ ಹೆಣೆಯುವಿಕೆ ಪ್ರಧಾನವಾಗಿದ್ದರು ಕಾವ್ಯತತ್ತ್ವಗಳು ಭರಪೂರವಾಗಿ ಕಂಡುಬರುತ್ತವೆ. ಕಾವ್ಯತತ್ತ್ವಗಳ ಪರಿಶೀಲನೆಯನ್ನು ಮಾಡದೆ ಭಾಸನ ರೂಪಕಗಳ ಪಾತ್ರವೈಶಿಷ್ಟ್ಯದ ಜ್ಞಾನ ಅಲಭ್ಯ. ಆದ ಕಾರಣ ಇಲ್ಲಿ ಸಂಕ್ಷೇಪವಾಗಿ ಭಾಸನ ಕಾವ್ಯಗಳಲ್ಲಿ ಅಂತರ್ಗತವಾದ ಕಾವ್ಯತತ್ತ್ವಗಳ ವಿವರಣೆಯನ್ನು ಯಥಾಮತಿ ನೀಡಲಾಗಿದೆ.

**ಛಂದಸ್ಸು:–**

**यदक्षरपरिमाणं छन्दः** ಎಂಬ ಮಾತಿನಂತೆ ಅಕ್ಷರಪರಿಮಾಣದಿಂದ ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವುದೇ ಛಂದಸ್ಸು ಎನಿಸಿಕೊಳ್ಳುತ್ತದೆ. ರೂಪಕಗಳ ಮಧ್ಯೆ ಬರುವಂತಹ ಶ್ಲೋಕಗಳಲ್ಲಿ ವಿಭಿನ್ನವಾದ ಛಂದೋಭೇದಗಳನ್ನು ನೋಡಬಹುದು. ಭಿನ್ನ ವೃತ್ತಗಳ ನಿವೇಶ ಕವಿಪ್ರತಿಭೆಯ ದ್ಯೋತಕವಾಗಿದೆ. ಸಂದರ್ಭೋಚಿತವಾಗಿ ಭಾಸನು ಅಕ್ಷರಚ್ಛಂದಸ್ಸನ್ನನು ಮಾತ್ರಾಚ್ಛಂದಸ್ಸನ್ನು ಬಳಸಿದ್ದಾನೆ. ಎಲಾ ರೂಪಕಗಳಲ್ಲಿದ್ದಂತೆ ಅಕ್ಷರಚ್ಛಂದಸ್ಸಿನ ಬಳಕೆ ಅತ್ಯಂತ ಹೆಚ್ಚಾಗಿ ಕಂಡುಬರುತ್ತದೆ. ಭಾಸನು ಪ್ರಸಿದ್ಧವಾದ ವೃತ್ತಗಳಲ್ಲೇ ಶ್ಲೋಕಗಳನ್ನು ರಚಿಸಿದ್ದಾನೆ. ಅತ್ಯಧಿಕವಾಗಿ ಅನುಷ್ಟುಬ್, ವಸಂತತಿಲಕಾ ಹಾಗೂ ಶಾರ್ದೂಲವಿಕ್ರೀಡಿತ ಛಂದಸ್ಸುಗಳಲ್ಲಿ ಶ್ಲೋಕಗಳನ್ನು ರಚಿಸಿರುವುದು ಕಂಡುಬರುತ್ತದೆ. ಬಹಳಷ್ಟು ಛಂದಸ್ಸಿನ ಪ್ರಭೇದಗಳನ್ನು ಬಳಸುವ ವ್ಯವಹಾರಕ್ಕೆ ಭಾಸನು ಹೋದ ಹಾಗೆ ಕಾಣುವುದಿಲ್ಲ.

**ಅಲಂಕಾರಗಳು:–**

ಕಾವ್ಯದ ಶೋಭೆಯನ್ನು ಅತಿಶಯವಾಗಿ ಹೆಚ್ಚಿಸುವ ಕಾವ್ಯತತ್ತ್ವಗಳಿಗೆ ಅಲಂಕಾರಗಳು ಎನ್ನುವರು. ಭಾಸನು ತನ್ನ ರೂಪಕಗಳ ಶ್ಲೋಕಗಳಲ್ಲಿ ಹಾಗೂ ಸಂಭಾಷಣೆಯ ವಾಕ್ಯಗಳಲ್ಲಿ ಅಲಂಕಾರಗಳನ್ನು ಸಂದರ್ಭೋಚಿತವಾಗಿ ಬಳಸಿದ್ದಾನೆ.

**"आलम्बभूता यष्टीव नोपेक्षा साम्प्रतं मया"** [1] **"आदर्शे वल्कलानीव किमेते सूर्यरश्मयः"** [2] **"सिंहदर्शनवित्रस्ता मृगीव परितप्यते"** [3]

---

1. ಯಜ್ಞಫಲ–1–22
2. ಪ್ರತಿಮಾನಾಟಕ–1–9
3. ಅಭಿಷೇಕನಾಟಕ–2–3

चन्द्रलेखेव शोभते"[4] "व्याघ्रानुसारचकिता हरिणीव यासि"[5] ಮುಂತಾದ ಹಲವು ವಾಕ್ಯಗಳಲ್ಲಿ ಉಪಮಾಲಂಕಾರದ ವೈಭವವನ್ನು ಕಾಣಬಹುದು.

"स्त्रीद्रव्येणानुकम्पितः"[6] "राजसिंहः प्रशास्तु नः"[7] ಮುಂತಾದ ವಾಕ್ಯಗಳಲ್ಲಿ ರೂಪಕವಿಶೇಷಗಳನ್ನು ಆಸ್ವಾದಿಸಬಹುದು. ಹಾಗೆಯೇ "क्व नृपत्वमलल्पविप्लवं क्व" "राहुवक्रान्तरगता कुमारास्सुकुमारचेतसः"[8] "क्वाहं मन्दमतिः क्व चागमतपः"[9] ಎಂಬಲ್ಲಿ ವಿಷಮಾಲಂಕಾರವನ್ನು ಕಾಣಬಹುದು. "काले सर्वं सुखावहम्"[10] "पुत्रः स एव पितरौ नयति स्वरित्थं भारायमाणवपुषो विगुणास्तथान्ये"[11] ಮುಂತಾದ ವಾಕ್ಯಗಳಲ್ಲಿ ಅರ್ಥಾಂತರನ್ಯಾಸದ ವೈಭವವಿದೆ.

ಈ ರೀತಿಯಾಗಿ ಹದಿನಾಲ್ಕು ರೂಪಕಗಳಲ್ಲಿ ಸಂದರ್ಭೋಚಿತವಾಗಿ ಅನೇಕ ಅಲಂಕಾರಗಳು ಬಳಸಲ್ಪಟ್ಟಿವೆ.

**ರೀತಿಗಳು :-**

ರೀತಿಯನ್ನು ಕಾವ್ಯರಚನೆಯ ಶೈಲಿ ಎಂದು ಸಂಕ್ಷೇಪವಾಗಿ ಹೇಳಬಹುದು. ಶ್ಲೋಕಗಳಲ್ಲಿ ಬಳಸುವ ವಾಕ್ಯಗಳಲ್ಲಿ ರೀತಿಯು ಕಂಡುಬರುತ್ತದೆ. ವೈದರ್ಭಿ ಮುಂತಾದ ರೀತಿಭೇದಗಳನ್ನು ಭಾಸನು ಯಥೋಚಿತವಾಗಿ ಬಳಸಿದ್ದಾನೆ. ಎಲ್ಲಾ ಕವಿಗಳಂತೆ ವೈದರ್ಭೀರೀತಿಯೇ ಅಧಿಕವಾಗಿದೆ.ಪ್ರಾಯಶಃ ತೊಂಬತ್ತು ಭಾಗ ಶ್ಲೋಕಗಳು ವೈದರ್ಭೀರೀತಿಯಲ್ಲಿ ರಚಿಸಲ್ಪಟ್ಟಿವೆ. ಅಲ್ಲದೇ "कण्ठे सङ्गृह्य धृष्टं मुदिततरमुखो मुष्टिना निर्जघान"[12] "कान्ताः प्रस्फुरिताधरोष्ठरुचयो विस्तस्त्रकेशस्रजः"[13] ಮುಂತಾದ ಅನೇಕ ವಾಕ್ಯಗಳಲ್ಲಿ ಗೌಡೀ ರೀತಿಯನ್ನು ಕಾಣಬಹುದು. ಉಳಿದ ಅನೇಕ ಶ್ಲೋಕಗಳಲ್ಲಿ ಇವೆರಡರ ಮಿಶ್ರಣವಾದ ಪಾಂಚಾಲೀ ರೀತಿಯನ್ನು ಕಾಣಬಹುದು.

---

4. ದೂತವಾಕ್ಯ–07
5. ಚಾರುದತ್ತ–1–9
6. ಚಾರುದತ್ತ–3–17
7. ದೂತವಾಕ್ಯ–1–56
8. ಯಜ್ಞಫಲ–2–41
9. ಯಜ್ಞಫಲ–4–4
10. ಯಜ್ಞಫಲ–2–24
11. ಯಜ್ಞಫಲ–2–25
12. ಅಭಿಷೇಕನಾಟಕ–3–7
13. ಬಾಲಚರಿತ–4–1

**ರಸಗಳು:–**

ರಸವೇ ಕಾವ್ಯದ ಜೀವಾತುವಾಗಿದೆ. ರಸಸ್ಯಂದಿಗಳಾದ ಕಾವ್ಯಗಳು ಸಹೃದಯರ ಹೃದಯಗಳನ್ನು ಅತಿಶಯವಾಗಿ ಸಂತೋಷಿಸುತ್ತವೆ. ಭಾಸನೂ ತಮ್ಮ ರೂಪಕಗಳಲ್ಲಿ ರಸಪೂರಣೆಯನ್ನು ಮಾಡಿದ್ದಾನೆ. ರಸಪ್ರಪಂಚವು ಅಗಾಧವಾಗಿರು- ವುದರಿಂದ ಇದಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾದ ಲೇಖನವನ್ನು ಸಿದ್ಧಪಡಿಸಲಾಗಿದೆ.

**ಗುಣಗಳು:–**

ಕಾವ್ಯಗಳಲ್ಲಿ ಶಬ್ದಾರ್ಥನಿಷ್ಠವಾದ ಅನೇಕ ಗುಣಗಳಿರುತ್ತವೆ. ಭಾಸನ ರೂಪಕಗಳಲ್ಲಿ ಕಂಡುಬಂದಂತಹ ಕೆಲವೊಂದು ಪ್ರಧಾನ ಗುಣಗಳನ್ನು ಇಲ್ಲಿ ಸಂಕ್ಷೇಪವಾಗಿ ವಿಶ್ಲೇಷಿಸಲಾಗಿದೆ.

**“अनुचरति शशाङ्कं राहुदोषेऽपि तारा”** [14] **“हृदय भव सकामं यत्कृते शङ्कसे त्वम्”** [15] ಮುಂತಾದ ವಾಕ್ಯಗಳಲ್ಲಿ ಪ್ರಸಾದಗುಣವು ಮನಸ್ಸಿಗೆ ಆನಂದವನ್ನು ನೀಡುತ್ತದೆ. “क्रुद्धैर्वानरयूथपैरतिबलैरुत्पुच्छकर्णैर्वृताः” [16] **“सोऽयं खड्गः खगांशोरपहसिततनुः स्वैः करैः नन्दकाख्यः”** [17] ಇತ್ಯಾದಿ ಶ್ಲೋಕಗಳಲ್ಲಿ ನಾವು ಓಜೋಗುಣವನ್ನು ಕಾಣಬಹುದು. ಹಾಗೆಯೇ **“पूर्णेन्दुकुन्दकुमुदोदरहारगौरः”** [18] **“रिपुनृपनगरे वाबन्धने वा वने वा”** [19] ಮುಂತಾದ ಕಡೆಗಳಲ್ಲಿ ಮಾಧುರ್ಯ ಗುಣವನ್ನು ಕಾಣಬಹುದು. **रूपश्रिया समुदितां गुणतश्च युक्तां लब्ध्वा प्रियां मम तु मन्द इवाद्य शोकः** [20] ಮುಂತಾದ ಕಡೆಗಳಲ್ಲಿ ಅರ್ಥವ್ಯಕ್ತಿಗುಣವಿದೆ. ಹೀಗೆ ಸಂದರ್ಭೋಚಿತವಾಗಿ ಬಹಳಷ್ಟು ಗುಣಗಳು ಭಾಸನಿಂದ ಬಳಸಲ್ಪಟ್ಟಿವೆ.

**ಉಪಸಂಹಾರ:–**

ಮಹಾಕವಿ ಭಾಸನು ಕಾವ್ಯದ ಪ್ರಕಾರಗಳಲ್ಲಿ ರೂಪಕಗಳನ್ನು ಮಾತ್ರ ರಚಿಸಿದ್ದರು ಅವನು ಸರ್ವವಿಧಕಾವ್ಯಗಳ ರಚನೆಯಲ್ಲೂ ನಿಪುಣನೇ. ಎಲ್ಲಾ ರೂಪಕಗಳನ್ನು ನಾಟ್ಯಶಾಸ್ತ್ರೋಕ್ತವಾದ ಅಲಂಕಾರಶಾಸ್ತ್ರಗ್ರಂಥಗಳಲ್ಲಿ ವರ್ಣಿಸಿದ್ದಂತಹ ಕಾವ್ಯಗುಣಗಳು ಸಂದರ್ಭೋಚಿತವಾಗಿಬಳಸಲ್ಪಟ್ಟಿವೆ.

---

14. ಪ್ರತಿಮಾನಾಟಕ–1–25
15. ಪ್ರತಿಮಾನಾಟಕ–3–9
16. ಅಭಿಷೇಕನಾಟಕ– 6–3
17. ದೂತವಾಕ್ಯ– 51
18. ದೂತವಾಕ್ಯ–49
19. ಪ್ರತಿಜ್ಞಾಯೌಗಂಧರಾಯಣ–1–14
20. ಸ್ವಪ್ನವಾಸವದತ್ತ–5–2

ಸ್ಥಾಲೀಪುಲಾಕನ್ಯಾಯದಂತೆ ಅತ್ಯಲ್ಪಮಾತ್ರ ಇಲ್ಲಿ ವಿಶ್ಲೇಷಣೆಗಾಗಿ ಹೇಳಲ್ಪಟ್ಟಿದೆ. ಸಹೃದಯರು ಕಾವ್ಯತತ್ತ್ವಗಳ ಸೋದಾಹರಣ ಜ್ಞಾನಲಾಭಕ್ಕೆ ಖಂಡಿತವಾಗಿಯೂ ಭಾಸನ ರೂಪಕಗಳನ್ನು ಶರಣು ಹೋಗಬಹುದು.

**ವಿದ್ವಾನ್ ವನರಾಜ ಬಿ. ಕೆ.,**
ಸಹಾಯಕ ಪ್ರಾಧ್ಯಾಪಕರು,
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ,
ಪಂಪಮಹಾಕವಿ ರಸ್ತೆ,
ಚಾಮರಾಜ ಪೇಟೆ,
ಬೆಂಗಳೂರು–560018
ಚರದೂರವಾಣೀ : 9901731524

*********



Jyotishashastra-Dharmashastra Vidwan

**Dr. Gopalkrishna Hegde**

**Director and Chief-Editor**

The Journal of Veda Samskrita Academy is an ISSN 2250-1711 numbered Bi-Annual National Refereed Research Journal dedicated to indological pursuits published by the Veda Samskrita Academy, Hegde. One of the objectives of the Veda Samskrita Academy, Hegde, is to encourage researchers and scholars to publish the results of their research in the form of a research paper in Samskrita / English / Hindi / Kannada. Accordingly, contributions from scholars working in different fields like Literature, Grammar, Philosophy, all branches of Vedas, Vedangas, Darshanas and Shiksha Shastras and so on are highly welcome. However, good and original but brief creative writings in Samskrita in the form of poetry, prose, stories etc. would also equally be welcome. Regular issue of the Journal will contain research papers and small literacy pieces, book reviews, discussions and comments on research publications.

The Academy would also invite high standard research papers from well known eminent scholars. Other research papers submitted by research scholars would be reviewed and refereed by eminent scholars in the relevant field. Only such research papers reviewed by referees will be finally accepted for publication.

